ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮನಸ್ವಿನಿ ಹಾಗೂ ಮೈತ್ರಿ ಯೋಜನೆಗಳಡಿ ನೀಡಲಾಗುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ: 1.ಸರ್ಕಾರದ ಆದೇಶ ಸಂಖ್ಯೆ:, ಕಂಇ 94 ಡಿ ಎಸ್ ಪಿ 2013, ದಿನಾಂಕ:01.08.2013.
2.ಸರ್ಕಾರದ ಆದೇಶ ಸಂಖ್ಯೆ: ಕಂಇ 95 ಡಿ ಎಸ್ ಪಿ 2013, ದಿನಾಂಕ:01.08.2013
3.ಸರ್ಕಾರದ ಆದೇಶ ಸಂಖ್ಯೆ: ಕಂಇ 47 ಡಿ ಎಸ್ ಪಿ 2018, ದಿನಾಂಕ:18.03.2018

ಪ್ರಸ್ತಾವನೆ:

ಸರ್ಕಾರವು ಅಸಹಾಯಕ ವೃದ್ಧರಿಗೆ /ನಿರ್ಗತಿಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ, ಅವಿವಾಹಿತ /ವಿಚ್ಛೇದಿತ ಮಹಿಳೆಯರಿಗೆ /ಅಂಗತ್ವ ಅಲ್ಪಸಂಖ್ಯಾತರಿಗೆ ಹಾಗೂ ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವನಿಟ್ಟಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ನೀಡುತ್ತಿರುತ್ತದೆ.

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ವಿಚ್ಛೇದಿತ / ಅವಿವಾಹಿತ ಮಹಿಳೆಯರಿಗೆ ಮನಸ್ವಿನಿಯೋಜನೆಯಡಿ ಮಾಸಿಕ ರೂ.500/- ಪಿಂಚಣಿಯನ್ನು ನೀಡಲಾಗುತ್ತಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಅಂಗತ್ವ ಅಲ್ಪಸಂಖ್ಯಾತರಿಗೆ ಮೈತ್ರಿ ಯೋಜನೆಯಡಿ ಮಾಸಿಕರೂ.500/- ಪಿಂಚಣಿಯನ್ನು ನೀಡಲಾಗುತ್ತಿದೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಮನಸ್ವಿನಿ ಮತ್ತು ಮೈತ್ರಿ ಯೋಜನೆಗಳ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಿಕ ಪಿಂಚಣಿಯನ್ನು ರೂ.500/- ರಿಂದ ರೂ.600/- ಹೆಚ್ಚಿಸಲಾಗಿರುತ್ತದೆ.

2022-23ನೇ ಸಾಲಿನ ಆಯವ್ಯಯದ ಘೋಷಣೆ ಕಂಡಿಕೆ 353 ರಡಿ ಮಾಸಿಕ ಪಿಂಚಣಿಯನ್ನು ಯೋಜನೆಗಳಡಿ ನೀಡಲಾಗುತ್ತಿರುವ ಮಾಸಾಶನವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಲಾಗಿದೆ, ಈ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಡಿಎಸ್ಎಸ್ಪಿ/ಒಎಪಿ/7/2022; ಬೆಂಗಳೂರು,
ದಿನಾಂಕ:1ನೇ ಏಪ್ರಿಲ್ 2022

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2022-23ನೇ ಸಾಲಿನ ಆಯವ್ಯಯದ ಕಂಡಿಕೆ 353 ರಲ್ಲಿ ಘೋಷಿಸಿರುವಂತೆ ಮನಸ್ವಿನಿ ಮತ್ತು ಮೈತ್ರಿ ಯೋಜನೆಯಡಿ ಪ್ರಸ್ತುತ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ದಿನಾಂಕ: 01/04/2022 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹೆಚ್ಚಿಸಿ ಆದೇಶಿಸಿದೆ.

1.ಮನಸ್ವಿನಿ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲಾಗಿದೆ.

2. ಮೈತ್ರಿ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲಾಗಿದೆ.

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಈಗಾಗಲೇ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಈ ಆದೇಶದಲ್ಲಿ ಹೆಚ್ಚಿಸಿರುವ ಮಾಸಾಶನ ಮೊತ್ತವನ್ನು ವಿತರಿಸಲು ಆಯುಕ್ತರು, ಖಜಾನೆ ಆಯುಕ್ತಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು /ಉಪಖಜಾನಾಧಿಕಾರಿಗಳು ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

....2

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 343 ವೆಚ್ಚ-7/2022; ದಿನಾಂಕ: 07.04.2022 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 38 ಪಿಎಫ್‌ಒ 2022; ದಿನಾಂಕ:08.04.2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಯಲಕ್ಷ್ಮಿ) 11/04/22
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ಸೇವೆಗಳು-3, ಕೆ.ಎ.ಟಿ.ಹಿ ಬಾನಿ ಮತ್ತು
ಭೂ.ಸು.ಕೋ ಮತ್ತು ಸಾ ಭಹಿ ಪಿಂಚಣಿ)
11/04/2022

ಇವರಿಗೆ: ಸಂಕಲನಕಾರರು, ಕರ್ನಾಟಕರಾಜ್ಯ, ವಿಕಾಸಸೌಧ, ಬೆಂಗಳೂರು ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ, ಪ್ರಕಟಿಸಿ ಪ್ರಕಟಿತ 100 ಪ್ರತಿಗಳನ್ನು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು, ಇವರಿಗೆ ಒದಗಿಸಬೇಕೆಂದುಕೋರಿದೆ.

ಪ್ರತಿ:

1. ಮಹಾಲೇಖಪಾಲರ (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ), (ಎ ಮತ್ತು ಇ) ಕರ್ನಾಟಕ, ಆಡಿಟ್ ಭವನ ಅಂಚೆ ಪಟ್ಟಿಗೆ ಸಂಖ್ಯೆ:5329/5369, ಪಾರ್ಕ್ ಹೌಸ್ ರೋಡ್, ಬೆಂಗಳೂರು-560001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, (ಆಯವ್ಯಯ ಮತ್ತು ಸಂಪನ್ಮೂಲ), ವಿಧಾನ ಸೌಧ, ಬೆಂಗಳೂರು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ ಕೆಪಿಸಿಎಲ್ ಶ್ರೀನ್ ಕಟ್ಟಡ, ಅರಮನೆ ರಸ್ತೆ. ಬೆಂಗಳೂರು.
7. ಪ್ರಾದೇಶಿಕ ಆಯುಕ್ತರು,ಬೆಂಗಳೂರು/ಮೈಸೂರು/ಬೆಳಗಾವಿ /ಕಲಬುರಗಿ ವಿಭಾಗ.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಜಂಟಿ ಕಾರ್ಯದರ್ಶಿ,(ಸಚಿವ ಸಂಪುಟ ಶಾಖೆ) ವಿಧಾನಸೌಧ,ಬೆಂಗಳೂರು.
10. ಉಪ ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಸರ್ಕಾರದಅಧೀನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚ-7) ವಿಧಾನ ಸೌಧ ಬೆಂಗಳೂರು.
12. ಎಲ್ಲಾ ಉಪವಿಭಾಗಾಧಿಕಾರಿಗಳು /ತಹಶೀಲ್ದಾರ್‌ಗಳು(ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ).
13. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
14. ಹೆಚ್ಚುವರಿ ಪ್ರತಿ ಮತ್ತು ರಕ್ಷಾಕಡತ